# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-4067/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 12/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀಮತಿ ಸುರೇಖಾ ಸಂಜೀವ ತೆಂಡೂಲ್ಕರ್, ತಿಲಕವಾಡಿ, ಬೆಳಗಾವಿ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀಮತಿ ಸುರೇಖಾ ಸಂಜೀವ ತೆಂಡೂಲ್ಕರ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ತಾವು ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕೌಡೂರು ಗ್ರಾಮದ ರಂಗಪಲ್ಕಿ ಎಂಬಲ್ಲಿ ವಾಸವಾಗಿದ್ದು, ಈಗ ತಾನು 68 ವರ್ಷದ ವೃದ್ಧೆಯಾಗಿ ಹೃದಯ ರೋಗದಿಂದ ಬಳಲುತ್ತಿದ್ದು, ಔಷದೋಪಚಾರಕ್ಕಾಗಿ ತನ್ನ ಮಗಳ ಬಳಿ ಬೆಳಗಾವಿಯಲ್ಲಿ ಇರುತ್ತೇನೆಂದು, ಕೌಡೂರು ಗ್ರಾಮದ ತನ್ನ ಮನೆಯ ಪಕ್ಕದ ಸರ್ವೇ ನಂಬರ್ 207 ರಲ್ಲಿ ಶ್ರೀಮತಿ ರಾಧಾ ತೆಂಡೂಲ್ಕರ್ ಇವರು ಕೋಳಿ ಫಾರಂ ನಡೆಸುವ ಉದ್ದೇಶದಿಂದ ಕಟ್ಟಡವನ್ನು ನಿರ್ಮಿಸಲು ಬೈಲೂರು ಗ್ರಾಮ ಪಂಚಾಯತಿ ವತಿಯಿಂದ ಪರವಾನಗೆಯನ್ನು ಪಡೆದಿರುತ್ತಾರೆ. ಆದರೆ, ಕೋಳಿ ಫಾರಂ ಅನ್ನು ನಡೆಸುವುದರಿಂದ, ಪಕ್ಕದಲ್ಲಿ ವಾಸವಾಗಿರುವ ತನಗೆ ತನ್ನ ಆರೋಗ್ಯಕ್ಕೆ ತೊಂದರೆಯಾಗಿರುತ್ತದೆ. ಸದರಿ ಕೋಳಿ ಫಾರಂ ದೂರುದಾರರ ಮನೆಯಿಂದ 50.00 ಮೀ., ಒಳಗೆ ಇದ್ದರೂ ಸಹ ಪಂಚಾಯತಿಯವರು ಅನುಮತಿ ನೀಡಿರುತ್ತಾರೆ. ಈ ಬಗ್ಗೆ ದೂರುದಾರರು ಬೈಲೂರು ಗ್ರಾಮ ಪಂಚಾಯತಿ ಹಾಗೂ ಮೇಲಧಿಕಾರಿಗಳಿಗೆ ಅನೇಕ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ದೂರುದಾರರು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸದರಿ ಉದ್ದಿಮೆದಾರರಿಗೆ ಉದ್ದಿಮೆ ಪರವಾನಗೆ ನೀಡಲಾಗಿದೆಯೇ ಎಂಬ ಬಗ್ಗೆ ಮಾಹಿತಿಯನ್ನು ಕೋರಿದ್ದಾಗ, ಸದರಿ ಉದ್ದಿಮೆದಾರರಿಗೆ, ಉದ್ದಿಮೆ ಪರವಾನಗಿಯನ್ನು ನೀಡಿರುವುದಿಲ್ಲವೆಂದು ಮಾಹಿತಿ ನೀಡಿರುತ್ತಾರೆ. ಮೆಸ್ಕಾಂ ಸಂಸ್ಥೆಯವರು ಹಾಲು ಮತ್ತು ತತ್ಸಂಬಂಧಿ ಪದಾರ್ಥಗಳನ್ನು ತಯಾರು ಮಾಡುವ ಘಟಕಕ್ಕೆಂದು ವಿದ್ಯುಚ್ಛಕ್ತಿ ನೀಡಿರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ಇದಲ್ಲದೇ, ಬೈಲೂರು ಗ್ರಾಮ ಪಂಚಾಯತಿಯವರು ದೂರುದಾರರಿಗೆ ಪತ್ರ ಬರೆದು

ಕೋಳಿ ಸಾಕಾಣಿಕೆ ಇರುವ ಜಾಗದಿಂದ 100.00 ಮೀ., ಒಳಗೆ ಯಾವುದೇ ಮನೆಗಳು ಇಲ್ಲವೆಂದು ಸ್ಥಾನಿಕ ಪರಿಶೀಲನೆಯಿಂದ ತಿಳಿದು ಬಂದಿದೆ ಎಂದು ವರದಿ ನೀಡಿರುತ್ತಾರೆ. ಈ ಮೇಲಿನ ಎಲ್ಲ ಸುಳ್ಳು ಮಾಹಿತಿಯನ್ನೊಳಗೊಂಡಂತೆ ಉದ್ದಿಮೆದಾರರು ಕೋಳಿ ಫಾರಂ ಅನ್ನು ಪ್ರಸ್ತುತ ನಡೆಸುತ್ತಿರುತ್ತಾರೆ. ಇದರಿಂದ ಹೃದ್ರೋಗದಿಂದ ಬಳಲುತ್ತಿರುವ ತನ್ನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಮಾಣ ಉಂಟಾಗುತ್ತಿರುತ್ತದೆ ಎಂದು, ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಹಾಗೂ ಸದರಿ ಉದ್ದಿಮೆಯನ್ನು ಸ್ಥಳಾಂತರಿಸಲು ಆದೇಶಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಈ ಹಂತದಲ್ಲಿ ದೂರಿನಂಶಗಳನ್ನು ಪರಿಗಣಿಸಿ ಪ್ರಕರಣದ ತನಿಖೆಯನ್ನು ಉಡುಪಿಯ ಆರಕ್ಷಕ ಉಪಾಧೀಕ್ಷಕರಿಗೆ ವಹಿಸಲಾಗಿದ್ದು, ಏಕ ಕಾಲದಲ್ಲಿ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿತ್ತು. ಎದುರುದಾರರ ಆಕ್ಷೇಪಣೆಯನ್ನು ಹಾಗೂ ತನಿಖಾ ವರದಿಯನ್ನು ಈ ಕಛೇರಿಯಲ್ಲಿ ಸ್ವೀಕರಿಸಲಾಗಿರುತ್ತದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀಮತಿ ರಾಧ ಕೆ. ತೆಂಡೂಲ್ಕರ್ ಇವರು ತಮ್ಮ ಖಾಸಗಿ ಸ್ಥಳ ಸರ್ವೇನಂಬರ್:207/ಪಿ1 ರಲ್ಲಿ ಕಟ್ಟಡ ರಚನೆಗೆ ಗ್ರಾಮ ಪಂಚಾಯತಿಯಿಂದ ಪರವಾನಗೆ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಕಟ್ಟಡ ರಚನೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಆಕ್ಷೇಪಣೆ ಇದ್ದಲ್ಲಿ ಸಲ್ಲಿಸಲು 7 ದಿನಗಳ ಕಾಲಾವಕಾಶ ನೀಡಿ ನೋಟೀಸ್ ನೀಡಲಾಗಿತ್ತು. ಆದರೆ, ನೋಟೀಸ್‌ಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗದೆ ಇದ್ದ ಕಾರಣ, ಕಟ್ಟಡ ಪರವಾನಗೆಯನ್ನು ಅರ್ಜಿದಾರರಿಗೆ ನೀಡಲಾಗಿರುತ್ತದೆ. ನಂತರ ಶ್ರೀಮತಿ ಸುರೇಖಾ ಸಂಜೀವ ತೆಂಡೂಲ್ಕರ್ ಮತ್ತು ಅವರ ಮಗಳು ಕುಮಾರಿ ವೀಣಾ ತೆಂಡೂಲ್ಕರ್ ಇವರು ಸದರಿ ಕಟ್ಟಡ ರಚನೆಗೆ ಸಂಬಂಧಿಸಿದಂತೆ ತಕರಾರು ಅರ್ಜಿಯನ್ನು ದಿ:21/10/2011 ರಂದು ಸಲ್ಲಿಸಿರುತ್ತಾರೆ. ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದಾಗ ಅರ್ಜಿಯಲ್ಲಿ ಉಲ್ಲೇಖಿಸಿರುವ ದೂರು ಸತ್ಯಕ್ಕೆ ದೂರವಾಗಿರುವ ವಿಚಾರವೆಂದು ಗಮನಿಸಲಾಯಿತು. ಸದರಿ ಕೋಳಿ ಸಾಕಾಣಿಕೆ ಕೇಂದ್ರದ ಸುತ್ತಲೂ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಂಡು ಬಂದಿದ್ದು, ಕೋಳಿಗಳ ತ್ಯಾಜ್ಯವನ್ನು ಉದ್ದಿಮೆದಾರರು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಿರುವುದನ್ನು ಸಹ ಗಮನಿಸಲಾಗಿರುತ್ತದೆ. ಆದಗ್ಯೂ ಸದರಿ ಪರಿಸರದ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಪರವಾನಗಿದಾರರಾದ ಶ್ರೀಮತಿ ರಾಧ ತೆಂಡೂಲ್ಕರ್ ಇವರಿಗೆ ಪರಿಸರ ನೈರ್ಮಲ್ಯ ಮತ್ತು ಇನ್ನಿತರೆ ಮುನ್ನಚ್ಚರಿಕೆ ಕ್ರಮ ವಹಿಸಲು ಸೂಚಿಸಿ ನೋಟೀಸನ್ನು ಜಾರಿಗೊಳಿಸಲಾಗಿತ್ತು.

3. ಇದಲ್ಲದೇ, ಸದರಿ ಪರಿಸರದ ಸ್ವಚ್ಛತೆ/ನೈರ್ಮಲ್ಯದ ಬಗ್ಗೆ ತಾಲ್ಲೂಕು ಆರೋಗ್ಯಾಧಿಕಾರಿ, ಕಾರ್ಕಳ ತಾಲ್ಲೂಕು ಇವರು ಮೇಲಧಿಕಾರಿಗಳ ಸೂಚನೆ ಮೇರೆಗೆ ಸದರಿ ಪ್ರದೇಶದ ಸ್ಥಳ ಪರಿಶೀಲನೆ ನಡೆಸಿ

ವರದಿಯನ್ನು ನೀಡಿರುತ್ತಾರೆ. ಶ್ರೀಮತಿ ರಾಧ ತೆಂಡೂಲ್ಕರ್ ಇವರು ಕಟ್ಟಡ ರಚನಾ ಕಾಮಗಾರಿ ಪೂರ್ಣಗೊಳಿಸಿದ ನಂತರ ಕೋಳಿ ಸಾಕಾಣಿಕೆ/ಹೈನುಗಾರಿಕೆ ನಡೆಸಲು ಉದ್ಯಮ ಪರವಾನಗೆ ಕೋರಿ ತಮ್ಮ ಕಛೇರಿಗೆ ದಿ:28/11/2011 ರಂದು ಅರ್ಜಿ ಸಲ್ಲಿಸಿದ್ದ ಮೇರೆಗೆ ಗ್ರಾಮ ಪಂಚಾಯತಿ ನಿರ್ಣಯದಂತೆ ದಿ:27/02/2012 ರಂದು ಉದ್ದಿಮೆ ಪರವಾನಗಿಯನ್ನು ನೀಡಲಾಗಿರುತ್ತದೆ. ಉದ್ದಿಮೆದಾರರು ಪ್ರತಿವರ್ಷ ಪರವಾನಗೆಯನ್ನು ನಿಯಮಾನುಸಾರ ನವೀಕರಿಸಿಕೊಂಡು ಉದ್ಯಮವನ್ನು ನಡೆಸುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ.

4. ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯಲ್ಲಿ ತಾವು ದಿ:17/07/2015 ರಂದು ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿ, ಕಾರ್ಕಳ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೈಲೂರು ಹಾಗೂ ಅರ್ಜಿದಾರರಾದ ಶ್ರೀಮತಿ ಸುರೇಖ ಸಂಜೀವ ತೆಂಡೂಲ್ಕರ್ ಇವರುಗಳೊಂದಿಗೆ ಕಾರ್ಕಳ ತಾಲ್ಲೂಕಿನ ಕೌಡೂರು ಗ್ರಾಮದ ರಂಗನಪಲ್ಕೆಯಲ್ಲಿರುವ ಶ್ರೀಮತಿ ರಾಧ ಕೆ. ತೆಂಡೂಲ್ಕರ್ ಇವರ ಒಡೆತನದ ಕೋಳಿ ಫಾರಂ ಇರುವ ಕಟ್ಟಡಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ ಸದರಿ ಕೋಳಿಪಾರಂನ ಕಟ್ಟಡದ ಪೂರ್ವ ಭಾಗದ ಗೋಡೆಯಿಂದ ದಕ್ಷಿಣ ಗೋಡೆ ಕಡೆಗೆ ಕೇವಲ 51.00 ಮೀ., ಅಂತರದಲ್ಲಿ ದೂರುದಾರರ ವಾಸದ ಮನೆ ಇರುತ್ತದೆ. ವಿಚಾರಣೆ ಕಾಲದಲ್ಲಿ ಸದರಿ ಸ್ಥಳೀಯ ವಿದ್ಯಮಾನಗಳಿಂದ, ಸಂಗ್ರಹಿಸಿದ ದಾಖಲೆಗಳಿಂದ ಹಾಗೂ ಅರ್ಜಿದಾರರು ನೀಡಿದ ಮಾಹಿತಿ ಹಾಗೂ ಲಗತ್ತಿಸಿದ ದಾಖಲೆ ಪತ್ರಗಳಿಂದ ಶ್ರೀಮತಿ ರಾಧ ಕೆ. ತೆಂಡುಲ್ಕರ್ ಇವರು ಕೌಡೂರು ಗ್ರಾಮದ ಸರ್ವೆ ನಂಬರ್ 207/ಪಿ1 ರಲ್ಲಿ ಕಟ್ಟಡ ರಚನೆಗಾಗಿ ಪರವಾನಗೆ ಕೋರಿ ದಿ:18/07/2011 ರಂದು ಅರ್ಜಿ ಸಲ್ಲಿಸಿರುತ್ತಾರೆ. ಆದರೆ, ಅದರಲ್ಲಿ ಕಟ್ಟಡ ರಚನೆ ಯಾವ ಉದ್ದೇಶಕ್ಕೆಂದು ನಮೂದಿಸಿರುವುದಿಲ್ಲ. ಆದರೆ, ಬೈಲೂರು ಗ್ರಾಮ ಪಂಚಾಯತಿಯ ಪಿಡಿಒ ರವರು ನೀಡಿದ್ದ ಸಾರ್ವಜನಿಕ ನೋಟೀಸ್‌ನಲ್ಲಿ ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರು ವಾಣಿಜ್ಯ ಕಟ್ಟಡ ಕಟ್ಟಲು ಪರವಾನಗೆ ಕೋರಿದ್ದು, ಈ ಬಗ್ಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ತಿಳಿಸತಕ್ಕದ್ದು ಎಂದು ನೋಟೀಸ್ ಜಾರಿ ಮಾಡಿರುವುದು ಕಂಡು ಬರುತ್ತದೆ. ನಂತರ ದಿ:09/11/2011 ರಂದು ಪಿಡಿಒ ರವರು ಶ್ರೀಮತಿ ರಾಧ ತೆಂಡೂಲ್ಕರ್ ಇವರಿಗೆ ಪರವಾನಗೆಯನ್ನು ನೀಡಿರುತ್ತಾರೆ. ಅದಕ್ಕೂ ಪೂರ್ವದಲ್ಲಿ ಪ್ರಕರಣದ ದೂರುದಾರರು ದಿ:21/10/2011 ರಲ್ಲಿ ಪಿಡಿಒ ರವರಿಗೆ ಕಟ್ಟಡ ನಿರ್ಮಾಣದ ಬಗ್ಗೆ ತಕರಾರು ಅರ್ಜಿ ಸಲ್ಲಿಸಿದ್ದು, ಅದನ್ನು ಪಿಡಿಒ ರವರು ತಮ್ಮ ಕಛೇರಿಯಲ್ಲಿ ದಿ:03/11/2011 ರಲ್ಲಿ ಸ್ವೀಕರಿಸಿದ್ದರೂ, ಸದರಿ ತಕರಾರು ಅರ್ಜಿಗೆ ಯಾವುದೇ ಕ್ರಮ ಕೈಗೊಂಡಿರುವುದು ಕಂಡು ಬಂದಿರುವುದಿಲ್ಲ. ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರು ಕೋಳಿ ಶೆಡ್ ಕಟ್ಟಡ ನಿರ್ಮಿಸಲು ಪರವಾನಗೆ ಕೋರಿರುವ ಕಟ್ಟಡಕ್ಕೆ ದಿ:02/11/2011 ರಂದು (ಎಲ್‌ಟಿ-5) ವಿದ್ಯುತ್ ಸಂಪರ್ಕ ಅಳವಡಿಸಲು ಪಂಚಾಯತಿ ವತಿಯಿಂದ ನಿರಾಕ್ಷೇಪಣಾ ಪತ್ರ ನೀಡುವಂತೆ ಪಂಚಾಯತಿಗೆ ಅರ್ಜಿ

ಸಲ್ಲಿಸಿದ್ದು, ಸದರಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಪಡೆಯುವ ಸಂದರ್ಭದಲ್ಲಿ ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರು ಗ್ರಾಮ ಪಂಚಾಯತಿ ವತಿಯಿಂದ ನೀಡಲಾದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುವುದಿಲ್ಲ.

5. ದಿ:28/11/2011 ರಂದು ಉದ್ಯಮ ಮತ್ತು ವ್ಯಾಪಾರದ ಪರವಾನಗೆಯನ್ನು ಕೋರಿ ಸದರಿ ಶ್ರೀಮತಿ ರಾಧ ಕೆ. ತೆಂಡೂಲ್ಕರ್ ಇವರು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಉದ್ಯಮದ ವಿವರ ಎಂಬಲ್ಲಿ ಕೋಳಿ ಫಾರಂ/ಹೈನುಗಾರಿಕೆ ಎಂದು ನಮೂದು ಮಾಡಿರುತ್ತಾರೆ. ಶ್ರೀಮತಿ ರಾಧ ರವರಿಗೆ ನೀಡಲಾಗಿರುವ ಉದ್ದಿಮೆ ಪರವಾನಗೆಯಲ್ಲಿ 2012-13 ರಿಂದ 2015-06 ರವರೆಗೆ ಪರವಾನಗೆಯನ್ನು ನೀಡಿರುವುದು ಕಂಡು ಬರುತ್ತದೆ. ಹಾಗೂ ಸದರಿ ಪರವಾನಗೆಯಲ್ಲಿ ಕೋಳಿ ಮಾರಾಟದ ಅಂಗಡಿ ಎಂದು ಪರವಾನಗೆ ನೀಡಿರುವುದು ಕಂಡು ಬರುತ್ತದೆ. ಇದರಿಂದ ಕೋಳಿ ಸಾಕಾಣಿಕಗೆ ಪರವಾನಗೆ ನೀಡಿರುವುದು ಕಂಡು ಬರುವುದಿಲ್ಲ. ಆದರೂ ಸಹ ಶ್ರೀಮತಿ ರಾಧ ಕೆ. ತೆಂಡೂಲ್ಕರ್ ಇವರು ಅನಧಿಕೃತವಾಗಿ ಕೋಳಿ ಫಾರಂ ಅನ್ನು ನಡೆಸಿಕೊಂಡು ಬರುತ್ತಿರುವುದು ಕಂಡು ಬಂದಿರುತ್ತದೆ ಮತ್ತು ಸ್ಥಳೀಯ ವಿಚಾರಣೆಯಿಂದ ತಿಳಿದು ಬಂದಿರುತ್ತದೆ ಎಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ.

6. ಮುಂದುವರೆದು, ದೂರುದಾರರಾದ ಶ್ರೀಮತಿ ಸುರೇಖ ಸಂಜೀವ ತೆಂಡೂಲ್ಕರ್ ಇವರು ದಿ:22/05/2013 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಈ ಕುರಿತು ದೂರು ನೀಡಿದ್ದು, ಈ ಬಗ್ಗೆ ಕಾರ್ಕಳ ಆರೋಗ್ಯಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ದಿ:19/07/2013 ರಂದು ಬೈಲೂರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ವರದಿ ನೀಡಿರುತ್ತಾರೆ. ಹಾಗೂ ಅದೇ ವರದಿಯಲ್ಲಿ ಕೋಳಿ ಫಾರಂ ಮಾಲೀಕರಿಗೂ ಸಹ ಸೂಚನೆ ನೀಡಿರುತ್ತಾರೆ. ದಿ:28/11/2011 ರಂದು ಜರುಗಿದ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕೋಳಿ ಫಾರಂ ಕಟ್ಟಡ ಕಟ್ಟುವ ಶ್ರೀಮತಿ ರಾಧ ಕೆ.ತೆಂಡೂಲ್ಕರ್ ರವರಿಗೆ ಸೂಕ್ತ ವ್ಯವಸ್ಥೆ ಬಗ್ಗೆ ನೋಟೀಸ್ ನೀಡುವಂತೆ ಠರಾವು ಪಾಸ್ ಮಾಡಿರುವುದು ಕಂಡು ಬಂದಿರುತ್ತದೆ. ಇದಲ್ಲದೇ, ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರು ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಪಡೆಯಲು ಮೆಸ್ಕಾಂ ಇಲಾಖೆಗೆ ಸಲ್ಲಿಸಿದ ಅರ್ಜಿಯಲ್ಲಿ ಮಾತಾ ಮಿಲ್ಕ್ ಪ್ರಾಡಕ್ಟ್ಸ್ (ಕೋಳಿ ಸಾಕಾಣಿಕೆ) ಅಂತಲೂ ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಉಡುಪಿ ರವರು ನೀಡಿದ್ದ ಉದ್ದಿಮೆದಾರರ ಜ್ಞಾಪನಾ ವಿವರಣಾ ಪತ್ರದಲ್ಲಿ ಉತ್ಪನ್ನ, ಮಿಲ್ಕ್ ಪ್ರಾಡಕ್ಟ್ಸ್ ಅಂತಲೂ, ಎ.ಇ.ಇ., ಮೆಸ್ಕಾಂ ಅಂತಲೂ, ಮೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನೀಡಿರುವ ಫೀಸಿಬಿಲಿಟಿ ವರದಿಯಲ್ಲಿ ಮಿಲ್ಕ ಪ್ರಾಡಕ್ಟ್ ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಇದಲ್ಲದೇ, ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿಯವರು ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರ ಕೋಳೀ ಫಾರಂ ಉದ್ದಿಮೆಯು ದಿ:27/02/2012 ರಿಂದ

ಪ್ರಾರಂಭವಾಗಿದ್ದು, ಇದಕ್ಕೆ ಪೂರ್ವಬಾವಿಯಾಗಿ ಉದ್ದಿಮೆ ಪರವಾನಗಿಯನ್ನು ಹಾಗೂ ತಮ್ಮ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

7. ಇದಲ್ಲದೇ, ತಾಲ್ಲೂಕು ಆರೋಗ್ಯ ಅಧಿಕಾರಿಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಬೇಕು ಹಾಗೂ ಪ್ರತಿವರ್ಷ ನಿರಾಕ್ಷೇಪಣಾ ಪತ್ರವನ್ನು ನವೀಕರಿಸಿಕೊಳ್ಳಬೇಕೆಂದು ಇದ್ದರೂ ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರು ಯಾವುದೇ ನಿಯಮವನ್ನು ಪಾಲನೆ ಮಾಡದೆ ಉದ್ದಿಮೆಯನ್ನು ನಡೆಸಿಕೊಂಡು ಬರುತ್ತಿರುತ್ತಾರೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಇದರಿಂದ ಸದರಿ ಉದ್ದಿಮೆಯನ್ನು ಅಕ್ರಮವಾಗಿ ನಡೆಸಲು ಬೈಲೂರು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರವಿರಾಜ್ ಇವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿರುತ್ತದೆ ಎಂದು ತನಿಖಾಧಿಕಾರಿಯವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

8. ಸದರಿ ತನಿಖಾ ವರದಿಯ ಆಧಾರದ ಮೇಲೆ ಎದುರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ ತನಿಖಾಧಿಕಾರಿಯವರು ಸಲ್ಲಿಸಿರುವ ವರದಿ ವಾಸ್ತವಕ್ಕೆ ಪೂರಕವಾದ ವರದಿಯಲ್ಲವೆಂದು ತಾನು ಯಾವುದೇ ಕರ್ತವ್ಯಲೋಪವೆಸಗಿಲ್ಲವೆಂದು ತಿಳಿಸಿರುತ್ತಾರೆ.

9. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ತನಿಖಾ ವರದಿಯನ್ನು ಪರಿಶೀಲಿಸಿದಲ್ಲಿ, ಶ್ರೀಮತಿ ರಾಧ ಕೆ. ತೆಂಡೂಲ್ಕರ್ ಇವರು ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕೌಡೂರು ಗ್ರಾಮದ ರಂಗನಪಲ್ಕಿ ಎಂಬ ಜಾಗದಲ್ಲಿ ಸರ್ವೇ ನಂಬರ್ 207 ರಲ್ಲಿ ಕೋಳಿ ಫಾರಂ ಉದ್ದಿಮೆ ನಡೆಸುತ್ತಿರುವುದು ಸ್ಪಷ್ಟ ಪಟ್ಟಿರುತ್ತದೆ. ಸದರಿ ಕೋಳಿ ಫಾರಂ ಇರುವ ಕಟ್ಟಡ ಕಟ್ಟಲು ಶ್ರೀಮತಿ ರಾಧ ತೆಂಡೂಲ್ಕರ್ ರವರು ಕಟ್ಟಡ ಪರವಾನಗೆಗಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಕೋಳಿ ಫಾರಂ ನಡೆಸುವ ಬಗ್ಗೆ ತಿಳಿಸದೆ ಸುಳ್ಳು ಮಾಹಿತಿಯನ್ನು ನೀಡಿ ಅರ್ಜಿಯವನ್ನು ಸಲ್ಲಿಸಿರುವುದು, ಈ ಕಟ್ಟಡಕ್ಕೆ ಪರವಾನಗೆ ನೀಡುವ ಬಗ್ಗೆ ದೂರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದರೂ, ಎದುರುದಾರರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಶ್ರೀಮತಿ ರಾಧ ತೆಂಡೂಲ್ಕರ್ ರವರ ಕಟ್ಟಡ ಪರವಾನಗೆ ಕೋರಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಸುಳ್ಳು ಮಾಹಿತಿಯ ಮೇಲೆಯೇ ಸದರಿ ಶ್ರೀಮತಿ ರಾಧ ತೆಂಡೂಲ್ಕರ್ ರವರಿಗೆ ಕಟ್ಟಡ ಪರವಾನಗೆ ನೀಡಿರುವುದು ಸ್ಪಷ್ಟ ಪಟ್ಟಿರುತ್ತದೆ. ಇದಲ್ಲದೇ, ಎದುರುದಾರರು ಸುಳ್ಳು ಮಾಹಿತಿಯನ್ನು ನೀಡಿ ದೂರುದಾರರಾದ ಶ್ರೀಮತಿ ಸುರೇಖ ಸಂಜೀವ ತೆಂಡೂಲ್ಕರ್ ರವರ ಮನೆಯು ಸದರಿ ಕೋಳಿ ಫಾರಂನ ಕಟ್ಟಡದಿಂದ 51.00 ಮೀ., ಅಂತರದಲ್ಲಿ ಇದ್ದರೂ ಸಹ 100.00 ಮೀ., ಅಂತರದಲ್ಲಿ ಯಾವುದೇ ವಾಸ್ತವ್ಯದ ಕಟ್ಟಡ ಇಲ್ಲವೆಂದು ಸುಳ್ಳು

ಮಾಹಿತಿಯನ್ನು ನೀಡಿರುವುದು ಕಂಡು ಬರುತ್ತದೆ. ಇದಲ್ಲದೇ, ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರು ಮೇಲೆ ತಿಳಿಸಿದಂತೆ ವಿದ್ಯುಚ್ಛಕ್ತಿ ಪಡೆಯುವಾಗ ಸಲ್ಲಿಸಿರುವ ಅರ್ಜಿಯಲ್ಲಿ ಸಹ ಸುಳ್ಳು ಮಾಹಿತಿಯನ್ನು ನೀಡಿರುವುದು ಕಂಡು ಬಂದಿರುತ್ತದೆ.

10. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಶ್ರೀಮತಿ ರಾಧ ಕೆ. ತೆಂಡೂಲ್ಕರ್ ರವರು ಗ್ರಾಮ ಪಂಚಾಯತಿಗೆ ಸುಳ್ಳು ಮಾಹಿತಿಯನ್ನು ನೀಡಿ, ಕೋಳಿ ಫಾರಂ ಕಟ್ಟಡ ರಚನೆಗೆ ಗ್ರಾಮ ಪಂಚಾಯತಿ ವತಿಯಿಂದ ಪರವಾನಗೆಯನ್ನು ಪಡೆದು, ಕೋಳಿ ಫಾರಂ ಕಟ್ಟಡವನ್ನು ರಚಿಸಿ, ಕೋಳಿ ಫಾರಂ ನಡೆಸುತ್ತಿರುವುದು ಕಾನೂನುಬ್ಬಾಹಿರವಾಗಿದ್ದು, ಸದರಿ ಕೋಳಿ ಫಾರಂ ಕಟ್ಟಡವನ್ನು ಹಾಗೂ ಕೋಳಿ ಫಾರಂ ಅನ್ನು ಕಾನೂನಿಡಿ ಸೂಕ್ತ ಜರುಗಿಸಿ ತೆರವುಗೊಳಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/4/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 12/4/17